ಮುಖ್ಯಮಂತ್ರಿಯವರ ವಿಶೇಷ ಅನುದಾನದ ಮಂಜೂರಾತಿ

244 (493) ಶ್ರೀ ತನ್ವೀರ್ ಸೇತ್ (ನರಸಿಂಹರಾಜ) : ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮುಖ್ಯಮಂತ್ರಿಯವರ 100 ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ಎಷ್ಟು ನಗರ ಪಾಲಿಕೆಗಳಿಗೆ ಮಂಜೂರು ಮಾಡಲಾಯಿತು;

ಆ) ಈ 100 ಕೋಟಿ ರೂಪಾಯಿಗಳ ಅನುದಾನವನ್ನು ನಗರ ಪಾಲಿಕೆಗಳು ಹೇಗೆ ವೆಚ್ಚ ಮಾಡಬಹುದೆಂಬುದಕ್ಕೆ ಸರ್ಕಾರವು ಮಾರ್ಗದರ್ಶಿ ಸೂತ್ರವನ್ನು (ಗೈಡ್‌ಲೈನ್ಸ್) ನೀಡಲಾಗಿತ್ತೆ;

ಇ) ಮೈಸೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ, ಉಳಿದ ನಗರ ಪಾಲಿಕೆಗಳು ಈ ವಿಶೇಷ ಅನುದಾನವನ್ನು ಹೇಗೆ ವೆಚ್ಚ ಮಾಡಲಾಯಿತು;

ಈ) ಇದರಲ್ಲಿ ಪ್ರತಿ ವಿಧಾನಸಭೆಗೆ ಎಷ್ಟು ಅನುದಾನವನ್ನು ಮಂಜೂರು ಮಾಡಲಾಯಿತು;

ಉ) ಮೈಸೂರು ಮಹಾನಗರ ಪಾಲಿಕೆಗೆ ಮಂಜೂರಾಗಿದ್ದ 100 ಕೋಟಿ ರೂಪಾಯಿಗಳ ಮುಖ್ಯಮಂತ್ರಿಯವರ ವಿಶೇಷ ಅನುದಾನ ಸಮರ್ಪಕವಾಗಿ ಬಳಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಸದರಿ 100 ಕೋಟಿ ರೂಪಾಯಿಗಳ ಅನುದಾನದಲ್ಲಿ ಯಾವ ಯಾವ ಪ್ರಸ್ತಾವನೆಗಳನ್ನು ಸಲ್ಲಿಸಲಾಯಿತು; ಯಾವ ಯಾವ ಪ್ರಸ್ತಾವನೆಗಳು ಮಂಜೂರಾದವು; ಯಾವ ಯಾವ ಕಾಮಗಾರಿಗಳು ಪ್ರಗತಿಯಲ್ಲಿವೆ ಹಾಗೂ ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿವೆ.

ಋ) 2010–11ನೇ ಸಾಲಿಗೂ 100 ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ಮಂಜೂರು ಮಾಡಲು ಸರ್ಕಾರವು ಉದ್ದೇಶಿಸಿದೆಯೇ?

ಶ್ರೀ ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಮುಖ್ಯಮಂತ್ರಿಯವರ ರೂ. 100 ಕೋಟಿ ರೂಪಾಯಿಗಳ ವಿಶೇಷ ಅನುದಾನದ ಯೋಜನೆಯನ್ನು ರಾಜ್ಯದ ಏಳು ಮಹಾನಗರ ಪಾಲಿಕೆಗಳಾದ ಮೈಸೂರು, ಮಂಗಳೂರು, ಗುಲ್ಬರ್ಗಾ, ಬಳ್ಳಾರಿ, ಬೆಳಗಾಂ,

ಹುಬ್ಬಳ್ಳಿ–ಧಾರವಾಡ ಹಾಗೂ ದಾವಣಗೆರೆ ಮಹಾನಗರ ಪಾಲಿಕೆಗಳಿಗೆ ಸರ್ಕಾರವು ಮಂಜೂರು ಮಾಡಿದೆ.

ಆ) ಸರ್ಕಾರದ ಆದೇಶ ಸಂಖ್ಯೆ: ನಅಇ 25 ಎಬಿಸಿ 2008, ದಿನಾಂಕ: 25/8/2008ರ ಪ್ರಕಾರ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಲೋಕಸಭಾ, ರಾಜ್ಯಸಭಾ, ವಿಧಾನಸಭಾ, ವಿಧಾನ ಪರಿಷತ್ತು ಸದಸ್ಯರುಗಳು, ಮಹಾನಗರಪಾಲಿಕೆಯ ಮೇಯರ್, ಉಪಮೇಯರ್ ಜಿಲ್ಲಾಧಿಕಾರಿಗಳು, ಆಯುಕ್ತರು ಮಹಾನಗರಪಾಲಿಕೆ ಮತ್ತು ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಒಳಗೊಂಡಂತೆ ಸಮಿತಿಯನ್ನು ರಚಿಸಲು ಆದೇಶಿಸಲಾಗಿದ್ದು ಆ ಪ್ರಕಾರ ಕಾಮಗಾರಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಕಾಮಗಾರಿಗಳನ್ನು ಆಯ್ಕೆ ಮಾಡುವ ಬಗ್ಗೆ ಈ ಕೆಳಕಂಡ ಮಾರ್ಗ ಸೂಚಿಗಳನ್ನು ಸರ್ಕಾರವು ನಿಗದಿಪಡಿಸಿದೆ.

1. ಕೇವಲ ಪ್ರಾಮುಖ್ಯ ಪೌರಸೇವೆಗಳಿಗೆ (Core Municipal Services) ಸಂಬಂಧಿಸಿದಂತೆ ಹಾಗೂ ಬೃಹತ್ ಪ್ರಮಾಣದ ಕಾಮಗಾರಿಗಳು.
2. ಪಾಲಿಕೆಯ ವ್ಯಾಪ್ತಿಯಲ್ಲಿನ ಪ್ರದೇಶಗಳ ಸಣ್ಣ ಸಣ್ಣ ಕಾಮಗಾರಿಗಳನ್ನು ವಿವಿಧ ವಾರ್ಡ್‌ಗಳಲ್ಲಿ ಕೈಗೊಳ್ಳಬಾರದು, ಬೃಹತ್ ಕಾಮಗಾರಿಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳತಕ್ಕದ್ದು.
3. ಕುಡಿಯುವ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ಬೃಹತ್ ಮಳೆ ನೀರು ಚರಂಡಿಗಳು, ಟ್ರಂಕ್ ರಸ್ತೆಗಳ ಕುರಿತಾದ ಕಾಮಗಾರಿಗಳಿಗೆ ಆದ್ಯತೆ.
4. ಅವಶ್ಯಕತೆಯಿದ್ದರೂ ಸಂಪನ್ಮೂಲ ಕೊರತೆಯಿಂದ ಬಹಳ ದಿನಗಳಿಂದ ತೆಗೆದುಕೊಳ್ಳಲಾಗದೆ ನೆನೆಗುದಿಗೆ ಬಿದ್ದಿರುವಂತಹ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಆದ್ಯತೆ.

ಇ) ಸರ್ಕಾರದ ಮಾರ್ಗದರ್ಶಿ ಸೂತ್ರಗಳ ಅನ್ವಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ರಚಿತವಾದ ಜಿಲ್ಲಾ ಉಸ್ತುವಾರಿ ಸಮಿತಿಯಿಂದ/ ಸರ್ಕಾರದಿಂದ ಅನುಮೋದಿತವಾದ ಕ್ರಿಯಾಯೋಜನೆಯ ಅನ್ವಯ ಪಾರದರ್ಶಕ ಅಧಿನಿಯಮದಡಿ ಟೆಂಡರ್ ಮುಖಾಂತರ ಕಾಮಗಾರಿಗಳ ಅನುಷ್ಠಾನವನ್ನು ಕೈಗೊಳ್ಳಲಾಗಿದೆ. ವಿವಿಧ ಮಹಾನಗರ

ಪಾಲಿಕೆಗಳ ರೂ. 100 ಕೋಟಿ ಯೋಜನೆಯ ಪ್ರಗತಿಯ ವಿವರ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

ಕ್ರ. ಸಂ.	ಮಹಾನಗರ ಪಾಲಿಕೆ	ಒಟ್ಟು ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಬಿಡುಗಡೆಯಾದ ಕಾಮಗಾರಿಗಳು	ವೆಚ್ಚ
1	ದಾವಣಗೆರೆ	527	310	53.00	51.50
2	ಬಳ್ಳಾರಿ	31	8	47.00	47.03
3	ಮಂಗಳೂರು	251	63	57.00	51.18
4	ಹುಬ್ಬಳ್ಳಿ – ಧಾರವಾಡ	90	34	53.00	48.56
5	ಗುಲ್ಬರ್ಗಾ	48	1	38.00	32.48
6	ಮೈಸೂರು	136	102	47.00	38.47
7	ಬೆಳಗಾಂ	287	21	17.00	10.29
	ಒಟ್ಟು	**1370**	**539**	**312.00**	**279.51**

ಈ) ವಿವಿಧ ನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಒಳಪಡುವ ವಿಧಾನಸಭಾ ಕ್ಷೇತ್ರವಾರು ಮಂಜೂರು ಮಾಡಿರುವ ಕಾಮಗಾರಿಗಳ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಮಹಾನಗರ ಪಾಲಿಕೆ	ವಿಧಾನಸಭಾ ಕ್ಷೇತ್ರ	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಕಾಮಗಾರಿಗಳ ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ)
1	ದಾವಣಗೆರೆ	ಅ) ದಾವಣಗೆರೆ–ಉತ್ತರ	315	67.57
		ಆ) ದಾವಣಗೆರೆ–ದಕ್ಷಿಣ	212	31.61
2	ಬಳ್ಳಾರಿ	ಅ) ಬಳ್ಳಾರಿ–ಪಟ್ಟಣ	24	69.76
		ಆ) ದಾವಣಗೆರೆ–ಗ್ರಾಮೀಣ	07	30.31
3	ಮಂಗಳೂರು	ಅ) ಮಂಗಳೂರು ಉತ್ತರ	124	17.89
		ಆ) ಮಂಗಳೂರು ದಕ್ಷಿಣ	127	82.10

4	ಹುಬ್ಬಳ್ಳಿ-ಧಾರವಾಡ	ಅ) ಧಾರವಾಡ ಕ್ಷೇತ್ರ	14	15.50
		ಆ) ಹುಬ್ಬಳ್ಳಿ- ಧಾರವಾಡ ಪೂರ್ವ	18	19.91
		ಇ) ಹುಬ್ಬಳ್ಳಿ-ಧಾರವಾಡ ಸೆಂಟ್ರಲ್	28	36.38
		ಈ) ಹುಬ್ಬಳ್ಳಿ-ಧಾರವಾಡ ಪಶ್ಚಿಮ	30	28.21
5	ಗುಲ್ಬರ್ಗಾ	ಅ) ಗುಲ್ಬರ್ಗಾ ಉತ್ತರ	16	33.58
		ಆ) ಗುಲ್ಬರ್ಗಾ ದಕ್ಷಿಣ	24	65.40
6	ಮೈಸೂರು	ಅ) ಕೃಷ್ಣರಾಜ ವಿಧಾನಸಭಾ ಕ್ಷೇತ್ರ	49	50.94
		ಆ) ಚಾಮರಾಜ ವಿಧಾನ ಸಭಾ ಕ್ಷೇತ್ರ	45	25.70
		ಇ) ನರಸಿಂಹರಾಜ ಕ್ಷೇತ್ರ	34	6.54
		ಈ) ಮೂರೂ ವಿಧಾನಸಭಾ ಕ್ಷೇತ್ರಗಳಿಗೂ ಸಂಬಂಧಿಸಿದ ಕಾಮಗಾರಿಗಳು	06	13.17
		ಉ) ಕೃಷ್ಣರಾಜ ಮತ್ತು ಚಾಮರಾಜ ಕ್ಷೇತ್ರ ಎರಡಕ್ಕೂ ಸಂಬಂಧಿಸಿದ ಕಾಮಗಾರಿ	01	2.00
7	ಬೆಳಗಾಂ	ಅ) ಬೆಳಗಾವಿ ಉತ್ತರ	83	30.10
		ಆ) ಬೆಳಗಾವಿ ದಕ್ಷಿಣ	204	50.60

ಉ) ಮೈಸೂರು ನಗರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಶಾಶ್ವತವಾದಂತಹ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಪಾದಚಾರಿಗಳು ಸುಗಮವಾಗಿ ಮತ್ತು ಸುರಕ್ಷಿತವಾಗಿ ಸಾಗಲು ಸಬ್‌ವೇಗಳ ನಿರ್ಮಾಣ, ವಾಹನಗಳ ಸುಗಮ ಸಂಚಾರಕ್ಕಾಗಿ ಸೇತುವೆಗಳ ಪುನರ್ ನಿರ್ಮಾಣ, ರಸ್ತೆಗಳ ಅಗಲೀಕರಣ ಮತ್ತು ಪ್ರಮುಖ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು. ದಸರಾ ಮೆರವಣಿಗೆ ಸಾಗುವ ಹಾರ್ಡಿಂಜ್ ವೃತ್ತದಿಂದ ಬನ್ನಿ ಮಂಟಪದವರೆಗೆ ರಾಜಪಥ ನಿರ್ಮಾಣ, ಮಹಿಳೆಯರ ಕಾರ್ಯಚಟುವಟಿಕೆಗಾಗಿ ಸ್ತ್ರೀಶಕ್ತಿ ಭವನ ನಿರ್ಮಾಣ, ಅಕ್ವೇರಿಯಂ ನಿರ್ಮಾಣ, ಕಾರಂಜಿಕೆರೆ ಏರಿ ಸಮುದಾಯ ಉದ್ಯಾನವನ ನಿರ್ಮಿಸುವುದು, ಸ್ಮಶಾನಗಳ ಅಭಿವೃದ್ಧಿ, ಜಲ ಸಂಗ್ರಹಾಗಾರ ನಿರ್ಮಾಣ, ಕುಸ್ತಿ ಕಲೆಯನ್ನು ಪುನರ್ಜೀವನಗೊಳಿಸಲು ಗರಡಿಗಳ ನಿರ್ಮಾಣ ಹಾಗೂ ರಸ್ತೆಗಳ ಸುರಕ್ಷತೆಗಾಗಿ

014-127

ಉಪಕರಣ, ಮತ್ತು ಅಪರಾಧಗಳ ನಿಗ್ರಹಕ್ಕಾಗಿ ಪ್ರಮುಖ ಸ್ಥಳಗಳಲ್ಲಿ ಕ್ಯಾಮರಾಗಳ ಅಳವಡಿಕೆ ಹಾಗೂ ಇತರ ಅಭಿವೃದ್ಧಿ ಕಾಮಗಾರಿಗಳನ್ನು ರೂ.100 ಕೋಟಿ ವಿಶೇಷ ಅನುದಾನದಲ್ಲಿ ಕೈಗೊಳ್ಳಲಾಗಿರುತ್ತದೆ.

ಮಂಜೂರಾಗಿರುವ ಒಟ್ಟು 136 ಕಾಮಗಾರಿಗಳ ಪೈಕಿ 102 ಕೆಲಸಗಳು ಮುಕ್ತಾಯವಾಗಿರುತ್ತದೆ. ಉಳಿದ 34 ಕೆಲಸಗಳು ಪ್ರಗತಿಯಲ್ಲಿವೆ. ಅವುಗಳಲ್ಲಿ ಒಂದು ಕೆಲಸವು ರಾಜಮಾರ್ಗ ನಿರ್ಮಿಸಲು ಸಂಬಂಧಿಸಿದ್ದು, 4 ಬಾರಿ ಟೆಂಡರ್ ಕರೆದಿದ್ದು, ಈಗ ಪುನಃ ಟೆಂಡರ್ ಕರೆಯಲಾಗಿದೆ. 5 ರಸ್ತೆಗಳ ಬದಿಯಲ್ಲಿರುವ ಮರಗಿಡಗಳನ್ನು ಕಡಿಯುವುದಕ್ಕೆ ನಾಗರೀಕರ ವಿರೋಧ ಹಾಗೂ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಈ ಕೆಲಸಗಳನ್ನು ಪೂರ್ಣ ಪ್ರಮಾಣದಲ್ಲಿ ಪೂರ್ಣಗೊಳಿಸಲು ಆಗಿರುವುದಿಲ್ಲ.

ಈ ಅನುದಾನ ಬಳಕೆಯಿಂದ ಮೈಸೂರು ನಗರದ ನಾಗರೀಕರಿಗೆ ಅನುಕೂಲವಾಗಿದ್ದು ಈ ಅನುದಾನವನ್ನು ನಗರಪಾಲಿಕೆಯು ಸದ್ಬಳಕೆ ಮಾಡಿಕೊಂಡಿರುತ್ತದೆ.

ಊ) ಮೈಸೂರು ಮಹಾನಗರ ಪಾಲಿಕೆಯಲ್ಲಿ 136 ಕಾಮಗಾರಿಗಳು ಮಂಜೂರಾಗಿರುತ್ತವೆ, 102 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಮತ್ತು 34 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಋ) ಇಲ್ಲ.

ಮೈಸೂರು ಲಿಡ್ಕರ್ ಉದ್ದಿಮೆಯಲ್ಲಿ ಕೆಲಸ ಮಾಡುವವರಿಗೆ ವಂಚನೆಯಾಗಿರುವ ಬಗ್ಗೆ

245 (494) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಲಿಡ್ಕರ್ ಉದ್ದಿಮೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಶೇ.18 ರ ಅನುದಾನದಲ್ಲಿ 10,000 ರೂಪಾಯಿಗಳ ಸಾಧನ ಸಲಕರಣೆಗಳನ್ನು ವಿತರಣೆ ಮಾಡಲು ಕ್ರಮ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಲಿಡ್ಕರ್ ಉದ್ದಿಮೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ಸಾಧನ ಸಲಕರಣೆಗಳನ್ನು ನೀಡದೇ ಖಾಸಗಿ ಉದ್ದಿಮೆದಾರರೊಬ್ಬರಿಗೆ ಚೆಕ್ ಮೂಲಕ ಹಣ ಪಾವತಿಸಿದ್ದು, ಈ ಖಾಸಗಿ ಉದ್ದಿಮೆದಾರ ಸಲಕರಣೆಗಳನ್ನು ನೀಡದೇ,